# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

## ಭಾಗ ೮

### ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣ *(ಮುಂದುವರಿದ ಭಾಗ)*



ಭಗಿನಿ ದೇವಮಾತಾ ಒಂದು ಪುಸ್ತಕದಲ್ಲಿ ಭಾರತ ಮತ್ತು ಭಾರತೀಯರ ಬಗ್ಗೆ ತನ್ನ ನೆನಪುಗಳನ್ನು ಬರೆದಿದ್ದಾಳೆ. ಅಲ್ಲಿ ಒಬ್ಬ ಸ್ವೀಡನ್ ದೇಶದಿಂದ ಬಂದಿದ್ದ ಕ್ರೈಸ್ತ ಪಾದ್ರಿಯ ಬಗ್ಗೆ ಬರೆಯುತ್ತಾಳೆ. ಆಕೆಯ ತಾಯಿ ಮತ್ತು ಸಹೋದರಿಯ ಜೊತೆಗೆ ೧೮೯೩ರ ಜೂನ್ ತಿಂಗಳಿನಲ್ಲಿ ದೇವಮಾತಾ ಚಿಕಾಗೋದ ವಸ್ತು ಪ್ರದರ್ಶನಕ್ಕೆ ಬರುವವಳಿದ್ದಳು. ಆದರೆ ಅವರ ಕುಟುಂಬದಲ್ಲಿ ಒಂದು ಸಾವು ಸಂಭವಿಸಿತು. ಹೀಗಾಗಿ ಆಕೆ ವಸ್ತುಪ್ರದರ್ಶನಕ್ಕಾಗಲಿ, ಆಮೇಲೆ ನಡೆದ ಸರ್ವಧರ್ಮ ಸಮ್ಮೇಳನಕ್ಕಾಗಲಿ ಬರಲು ಸಾಧ್ಯವಾಗಲಿಲ್ಲ. ಆದರೆ ಇದೇ ಸಂದರ್ಭದಲ್ಲಿ ಸ್ವೀಡನ್ನಿನ ಕ್ರೈಸ್ತ ಪಾದ್ರಿಯ ಆಹ್ವಾನದ ಮೇರೆಗೆ ಆತನ ಮನೆಯಲ್ಲಿ ನಡೆದ ಒಂದು ಔತಣಕೂಟಕ್ಕೆ ಅವರೆಲ್ಲ ಹೋದರು. ಆತನು ಆಗತಾನೇ ವಿಶ್ವಧರ್ಮ ಸಮ್ಮೇಳನಕ್ಕೆ ಹೋಗಿ ಬಂದಿದ್ದನು. ಇದರಿಂದ ಬಹಳ ಉತ್ಸಾಹಭರಿತನಾಗಿ ಕಂಡುಬರುತ್ತಿದ್ದನು. ಅದರ ವಿಷಯವನ್ನು ಬಿಟ್ಟು ಬೇರೆ ಏನನ್ನೂ ಮಾತನಾಡುತ್ತಿರಲಿಲ್ಲ.

ಆ ಕ್ರೈಸ್ತ ಪಾದ್ರಿಯು ಸಮ್ಮೇಳನದಲ್ಲಿ ಜರುಗಿದ ಹಲವಾರು ಕಾರ್ಯಕ್ರಮಗಳನ್ನು ಬಣ್ಣಿಸುತ್ತಿದ್ದನು. ಪ್ರತಿಯೊಬ್ಬ ಪ್ರತಿನಿಧಿಯ ವಿಶೇಷತೆಗಳನ್ನು ಎತ್ತಿಹೇಳುತ್ತಿದ್ದನು. ''ಆದರೆ, ಒಬ್ಬ ಭಾಷಣಗಾರನಿದ್ದನು. ಆತನು ಇತರೆಲ್ಲ ಪ್ರತಿನಿಧಿಗಳಿಗಿಂತಲೂ ಉತ್ಕೃಷ್ಟನಾದವನು ಅದು ಭಾಷಣಕಲೆಯಲ್ಲಿರಬಹುದು, ಪಾಂಡಿತ್ಯದಲ್ಲಿ ಇರಬಹುದು ಅಥವಾ ಆಕರ್ಷಕ ವ್ಯಕ್ತಿತ್ವದಲ್ಲಿ ಇರಬಹುದು. ಇಬ್ಬರು ಮೂವರು ರೋಮನ್ ಕ್ಯಾಥೊಲಿಕ್ ಪುರೋಹಿತರನ್ನು ಬಿಟ್ಟರೆ, ಬೇರೆ ಯಾರ ಜೊತೆಗೂ ಅವನನ್ನು ಹೋಲಿಸುವ ಹಾಗಿಲ್ಲ.'' ಪಾದ್ರಿಯು ಇಷ್ಟಕ್ಕೆ ಸುಮ್ಮನಾದನು. ಕುತೂಹಲದಿಂದ ದೇವಮಾತಾ ಕೇಳಿದಳು, ''ಯಾರವನು?'' ಅದಕ್ಕೆ ಬಹು ಉತ್ಸಾಹದಿಂದ ಪಾದ್ರಿಯು ಉತ್ತರವನ್ನು ಕೊಟ್ಟನು: ''ಒಬ್ಬ ಹಿಂದೂ; ಸ್ವಾಮಿ ವಿವೇಕಾನಂದ.''

ಆ ಸಂದರ್ಭದಲ್ಲಿ ಬಹಳ ಪತ್ರಿಕೆಗಳು ಸ್ವಾಮೀಜಿಯವರನ್ನು ತಪ್ಪಾಗಿ ಹೆಸರಿಸುತ್ತಿದ್ದವು: ಬ್ರಾಹ್ಮಣ ಸಂನ್ಯಾಸಿ, ಬೌದ್ಧ ಭಿಕ್ಷು, ಥಿಯೊಸೊಫಿಸ್ಟ್ ಎಂಬುದಾಗಿ. ಇದರಲ್ಲಿ ಅವುಗಳದೇನೂ ತಪ್ಪಿರಲಿಲ್ಲ. ಸರಿಯಾದ ಮಾಹಿತಿಯ ಅಭಾವವೇ ಇದಕ್ಕೆ ಕಾರಣವಾಗಿತ್ತು. ಆದರೆ ಮುಂದೆ ಸ್ವಾಮೀಜಿಯ ಪ್ರಸಿದ್ಧಿಯನ್ನು ಕಂಡು, ಹಲವಾರು ಜನ ಶತ್ರುಗಳು ಹುಟ್ಟಿಕೊಂಡರು. ಅವರೆಲ್ಲ ಪತ್ರಿಕೆಗಳು ಮಾಡಿದ್ದ ಈ ತಪ್ಪುಗಳನ್ನೇ ಎತ್ತಿಹೇಳುತ್ತ, ಸ್ವಾಮೀಜಿಯವರ ವಿರುದ್ಧ ಅಪಪ್ರಚಾರ ಮಾಡಿದರು.

ಸರ್ವಧರ್ಮ ಸಮ್ಮೇಳನದ ದಿನಗಳಲ್ಲಿ ಸ್ವಾಮೀಜಿಗೆ ಬಿಡುವೇ ಇರಲಿಲ್ಲ. ಎಲ್ಲ ಪ್ರತಿನಿಧಿಗಳಿಗೂ ಅದೇ ಸ್ಥಿತಿ ಬಂದೊದಗಿತ್ತು ಎನ್ನಬಹುದು. ಹಲವಾರು ಸಮಾವೇಶಗಳಲ್ಲಿಯೇ ಸ್ವಾಮೀಜಿಯವರ ಕಾಲ ಕಳೆದುಹೋಗುತ್ತಿತ್ತು. ಸರ್ವಧರ್ಮ ಸಮ್ಮೇಳನದ ಮುಖ್ಯ ಕಾರ್ಯಕ್ರಮಗಳಲ್ಲದೆ, ಹಲವಾರು ಚಿಕ್ಕಪುಟ್ಟ ಸಭೆಗಳು ಕೂಡ ನಡೆಯುತ್ತಿದ್ದವು. ಅವುಗಳಲ್ಲೆಲ್ಲ ಪ್ರಬಂಧಗಳನ್ನು ಮಂಡಿಸಬೇಕಾಗಿತ್ತು. ಸಮ್ಮೇಳನದ ಐದನೆಯ ದಿನ, ವೈಜ್ಞಾನಿಕ ಸಮಾವೇಶ ಆರಂಭವಾಯಿತು. ಅದರ ಸಮಾವೇಶಗಳಲ್ಲಿ ಪಂಡಿತರು, ವಿಜ್ಞಾನಿಗಳು, ಉನ್ನತ ಹುದ್ದೆಯನ್ನು ಅಲಂಕರಿಸಿದ ಪ್ರತಿಷ್ಠಿತ ವರ್ಗದವರು ಪಾಲ್ಗೊಳ್ಳುತ್ತಿದ್ದರು. ಅಲ್ಲಿನ ವಿಚಾರಗಳು ವಿದ್ವತ್ಪೂರ್ಣವಾಗಿದ್ದವು. ಸಭಿಕರು ಹಲವಾರು ಪ್ರಶ್ನೆಗಳನ್ನು ಕೇಳುತ್ತಿದ್ದರು. ಆದರೆ ದುರದೃಷ್ಟವಶಾತ್, ಈ ಭಾಷಣಗಳ, ಪ್ರಶ್ನೋತ್ತರಗಳ ವಿಸ್ತೃತವಾದ ವರದಿ ನಮಗೆ ಲಭ್ಯವಿಲ್ಲ. ಆದರೆ ಬರೋಸ್ ಅವರ ಪುಸ್ತಕದಲ್ಲಿ ಆ ಭಾಷಣಗಳ ಶೀರ್ಷಿಕೆಗಳು, ಭಾಷಣಕಾರರು ಮತ್ತು ವಿಷಯಗಳ ಪಟ್ಟಿ ಲಭ್ಯವಿದೆ. ಅದರ ಪ್ರಕಾರ, ಸ್ವಾಮೀಜಿ ಸೆಪ್ಟೆಂಬರ್ ೨೨, ಶುಕ್ರವಾರದಂದು **'ಸಾಂಪ್ರದಾಯಿಕ ಹಿಂದೂಧರ್ಮ ಮತ್ತು ವೇದಾಂತ ತತ್ತ್ವ'**ದ ಬಗ್ಗೆ ಇದ್ದ ಸಮಾವೇಶವನ್ನು ನಡೆಸಿಕೊಟ್ಟರು. ಅಂದು ಮಧ್ಯಾಹ್ನ, ಸ್ವಾಮೀಜಿ ಮತ್ತು ಸ್ನೆಲ್ ಇಬ್ಬರೂ ಕೂಡಿಕೊಂಡು, **'ಭಾರತದ ಆಧುನಿಕ ಧರ್ಮಗಳು'** ಎಂಬ ವಿಚಾರದ ಬಗ್ಗೆ ಇನ್ನೊಂದು ಸಮಾವೇಶವನ್ನು ಜರುಗಿಸಿದರು. ಮರುದಿನ ಸ್ವಾಮೀಜಿ, **'ಜಪಾನೀಯರ ಬೌದ್ಧಧರ್ಮ'**ದ ಬಗ್ಗೆ ಭಾಷಣ ಮಾಡಿದರು. ಮತ್ತು ಸೋಮವಾರ, ಸೆಪ್ಟೆಂಬರ್ ೨೫ ರಂದು, **'ಹಿಂದೂ ಧರ್ಮದ ಸಾರಸರ್ವಸ್ವ'**ದ ವಿಷಯವಾಗಿ ಮಾತನಾಡಿದರು.

ಈ ವೈಜ್ಞಾನಿಕ ಸಮಾವೇಶದ ಉದ್ದೇಶ ಧರ್ಮಗಳ ತುಲನಾತ್ಮಕ ಅಧ್ಯಯನ ಮತ್ತು ಅವುಗಳನ್ನು ತಾಂತ್ರಿಕವಾಗಿ ವಿಶ್ಲೇಷಣೆ ಮಾಡುವುದು. ಈ ಸಮಾವೇಶಗಳಲ್ಲಿ ಸ್ವಾಮೀಜಿ ಭಾರತದ ಧರ್ಮದ ತಾತ್ತ್ವಿಕ ಮತ್ತು ಐತಿಹಾಸಿಕ ಅಂಶಗಳ ಬಗ್ಗೆ ಸುದೀರ್ಘವಾಗಿ ಮಾತನಾಡಿದ್ದರು ಎಂದು ಕಾಣುತ್ತದೆ. ಈ ರೀತಿ ಪಾಂಡಿತ್ಯಪೂರ್ಣವಾದ ಭಾಷಣಗಳನ್ನು ಅವರು ಇತರೆಡೆ ಮಾಡಲಿಲ್ಲ. ಸಾಮಾನ್ಯ ಜನತೆಯ ಸಲುವಾಗಿಯೇ ಅವರು ಬೇರೆ ಕಡೆಗಳಲ್ಲಿ ಪ್ರವಚನಗಳನ್ನು ಮಾಡಿದರು. ಆ ಭಾಷಣಗಳಲ್ಲಿ ತಮ್ಮ ವಿಚಾರಗಳನ್ನು ಉದ್ದೇಶಪೂರ್ವಕವಾಗಿಯೇ ಸರಳ ಭಾಷೆಯಲ್ಲಿ ಪ್ರಸ್ತುತಪಡಿಸಿದರು. ಆ ಭಾಷಣಗಳ ಉದ್ದೇಶ ತಮ್ಮ ಸಂದೇಶವನ್ನು ಹೆಚ್ಚುಹೆಚ್ಚು ಜನರಿಗೆ ತಲುಪಿಸುವುದೇ ಆಗಿತ್ತು.

ಚಿಕಾಗೋ ಇಂಟರ್ ಓಷನ್ ಎಂಬ ಪತ್ರಿಕೆಯು ತನ್ನ ಸೆಪ್ಟೆಂಬರ್ ೨೩ ರ ಆವೃತ್ತಿಯಲ್ಲಿ ವೈಜ್ಞಾನಿಕ ಸಮಾವೇಶದಲ್ಲಿ ಸ್ವಾಮಿ ವಿವೇಕಾನಂದರು ಸಭಿಕರು ಕೇಳಿದ ಅನೇಕ ಪ್ರಶ್ನೆಗಳಿಗೆ ಉತ್ತರಿಸಿದರು ಎಂದು ವರದಿ ಮಾಡಿತು: ''ನಿನ್ನೆಯ ವೈಜ್ಞಾನಿಕ ಸಮಾವೇಶದಲ್ಲಿ ಹಾಲ್ ಸಂಖ್ಯೆ ೩ರಲ್ಲಿ ಸ್ವಾಮಿ ವಿವೇಕಾನಂದರು **'ಸಾಂಪ್ರದಾಯಿಕ ಹಿಂದೂಧರ್ಮ'** ಎಂಬ ವಿಷಯವಾಗಿ ಮಾತನಾಡಿದರು. ಅವರಿಗೆ ನೂರಾರು ಪ್ರಶ್ನೆಗಳು ಬಂದವು. ಅವುಗಳನ್ನೆಲ್ಲ ವಿದ್ವಾಂಸರಾದ ಸ್ವಾಮಿಗಳು ಅದ್ಭುತವಾದ ಕೌಶಲದಿಂದ ಮತ್ತು ಲೀಲಾಜಾಲವಾಗಿ ಉತ್ತರಿಸಿದರು. ಈ ಸಮಾವೇಶದ ಕಡೆಯಲ್ಲಿ ಸಾಮಾನ್ಯ ಜನರಿಗೂ ಭಾಷಣಗಳನ್ನು ಮಾಡಬೇಕೆಂದು ಜನರು ಒತ್ತಾಯಿಸಿದರು. ಈ ಯೋಜನೆ ತಮ್ಮ ಮನಸ್ಸಿನಲ್ಲಿ ಇದೆ ಎಂದು ಸ್ವಾಮಿಗಳು ಅವರಿಗೆ ಆಶ್ವಾಸನೆಯನ್ನು ಇತ್ತರು.''

ಇದೇ ಸಮಾವೇಶದ ಇನ್ನೊಂದು ವರದಿಯನ್ನು ನಾವು ಮೆಸೆಂಜರ್ ಎಂಬ ಪತ್ರಿಕೆಯಲ್ಲಿ ಕಾಣುತ್ತೇವೆ. ಇದರ ದಿನಾಂಕ ನಮಗೆ ತಿಳಿದುಬಂದಿಲ್ಲ. ಈ ವರದಿಯಲ್ಲಿ ಇರುವ ವಿಶಿಷ್ಟ ಅಂಶವೆಂದರೆ, ಸಭಿಕರಲ್ಲಿ ಹಲವು ಜಾತಿಪಂಥಗಳಿಗೆ ಸೇರಿದ ಗಣ್ಯರು, ಪ್ರೊಟೆಸ್ಟಾಂಟ್ ಪಾದ್ರಿಗಳು, ಥಿಯೊಸೊಫಿಸ್ಟ್, ರಾಷ್ಟ್ರೀಯವಾದಿಗಳು ಇವರೆಲ್ಲ ಇದ್ದರು. ಸಭಾಭವನ ಕಿಕ್ಕಿರಿದು ತುಂಬಿತ್ತು. ಎಲ್ಲರೂ ಬಹಳ ಉತ್ಸಾಹದಿಂದ ಇದ್ದರು. ಆದರೂ ಈ ಭಿನ್ನ ಭಿನ್ನ ಅಭಿರುಚಿಯ ಸಭಿಕರು ಮತ್ತು ಕ್ರೈಸ್ತರಲ್ಲದ ಉಪನ್ಯಾಸಕರ (ಸ್ವಾಮೀಜಿ) ಮಧ್ಯೆ ಅಸಮಂಜಸ ಘರ್ಷಣೆಯೇನೂ ಇರಲಿಲ್ಲ.

ಈ ಸಮಾವೇಶಗಳಲ್ಲದೆ, ಚಿಕಾಗೋ ನಗರದ ಗಣ್ಯವ್ಯಕ್ತಿಗಳು ಸಮ್ಮೇಳನದ ಪ್ರತಿನಿಧಿಗಳಿಗೆ ಹಲವಾರು ಔತಣಕೂಟಗಳನ್ನು ಏರ್ಪಡಿಸಿದರು. ಅವುಗಳು ಮಧ್ಯಾಹ್ನ ಅಥವಾ ಸಂಜೆಯ ಹೊತ್ತು ನಡೆಯುತ್ತಿದ್ದವು. ಹೀಗಾಗಿ ಪ್ರತಿನಿಧಿಗಳಿಗೆ ಬಿಡುವೇ ಇರುತ್ತಿರಲಿಲ್ಲ. ಆ ಸಮಯದಲ್ಲಿ ಎಡಿಸನ್ನನ ವಿದ್ಯುದ್ದೀಪದ ಆವಿಷ್ಕಾರವಾಗಿತ್ತು. ಸಮ್ಮೇಳನದ ಸಭಾಂಗಣಗಳಲ್ಲಿ ವಿದ್ಯುದ್ದೀಪಗಳ ಸರಮಾಲೆ ಕಾಣಬರುತ್ತಿತ್ತು. ರಾತ್ರಿಯಂತೂ ಇಡೀ ಚಿಕಾಗೋ ಪ್ರದರ್ಶನದ ಅಂಗಣವು ವಿದ್ಯುದ್ದೀಪಗಳ ಬೆಳಕಿನಿಂದ ದಿವ್ಯಲೋಕದಂತೆ ಕಾಣಬರುತ್ತಿತ್ತು.

ಸ್ವಾಮಿ ವಿವೇಕಾನಂದರು ಚಿಕಾಗೋ ಜನರ ಪ್ರೀತಿ, ವಿಶ್ವಾಸಗಳಿಗೆ ಪಾತ್ರರಾಗಿದ್ದರು. ಅವರಿಗೆ ಹಲವಾರು ಕಡೆಗಳಿಂದ ಆಹ್ವಾನಗಳು ಬರುತ್ತಿದ್ದವು. ಚಿಕಾಗೋ ನಗರದ ಪ್ರತಿಷ್ಠಿತ ಗೃಹಗಳಲ್ಲಿ ಅವರು ಅತ್ಯಂತ ಜನಪ್ರಿಯ ವ್ಯಕ್ತಿಯಾಗಿದ್ದರು. ಹಲವು ವರ್ಷಗಳ ನಂತರ, ವಾಲ್‌ಕೋನ್ಸ್ಕಿ ಎಂಬ ರಷಿಯಾದ ಒಬ್ಬ ಪ್ರತಿನಿಧಿಯು ಆಲ್ಬರ್ಟ್ ಸ್ಪಾಲ್ಡಿಂಗ್ ಎಂಬ ಲೇಖಕನನ್ನು ಭೇಟಿ ಮಾಡಿದನು. ಆತನು Rise to Follow ಎಂಬ ತನ್ನ ಆತ್ಮಚರಿತ್ರೆಯಲ್ಲಿ ಹೀಗೆ ಹೇಳಿಕೊಂಡಿದ್ದಾನೆ: ''ವಾಲ್‌ಕೋನ್ಸ್ಕಿ ಒಬ್ಬ ಆಹ್ಲಾದಕರವಾದ ಸಂಭಾಷಣೆಗಾರ. ಅವನು ೧೮೯೩ರಲ್ಲಿ ಚಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಪ್ರತಿನಿಧಿಯಾಗಿ ಭಾಗವಹಿಸಿದ್ದನು. ಹೀಗಾಗಿ ನನ್ನ ದೇಶವಾದ ಅಮೆರಿಕೆಯ ಬಗ್ಗೆ ಅವನಿಗೆ ಚೆನ್ನಾಗಿಯೇ ತಿಳಿದಿದೆ. ಅಲ್ಲಿ ಸ್ವಾಮಿ ವಿವೇಕಾ

ನಂದರನ್ನು ಭೇಟಿಯಾಗಿದ್ದಿರಾ ಎಂದು ಆತನನ್ನು ನಾನು ಪ್ರಶ್ನಿಸಿದೆನು. 'ಖಂಡಿತವಾಗಿಯೂ' ಎಂದು ಅವನು ಉತ್ತರವಿತ್ತನು. ಇದಲ್ಲದೆ ಸ್ವಾಮಿಗಳು ಮತ್ತು ವಾಲ್‌ಕೋನ್ಸ್ಕಿ ಇಬ್ಬರ ನಡುವೆ ಪತ್ರವ್ಯವಹಾರ ಕೂಡ ನಡೆಯುತ್ತಿತ್ತು. ಇದೆಲ್ಲ ನನಗೆ ಹೇಗೆ ಗೊತ್ತಾಗಬೇಕು? ಆಗ ನಾನು ಬಹಳ ಚಿಕ್ಕವನಾಗಿದ್ದೆನು. 'ಸ್ವಾಮಿ ವಿವೇಕಾನಂದರ ಬಗ್ಗೆ ನಿನಗೆ ಹೇಗೆ ತಾನೇ ಗೊತ್ತು?' ಎಂದು ಆತನು ಅಚ್ಚರಿಯಿಂದ ಕೇಳಿದನು. ಇದಕ್ಕೆ ನಾನು ಹೇಳಿದೆ: 'ನನ್ನ ಕುಟುಂಬವರ್ಗದವರು ಸ್ವಾಮಿಗಳ ಜೊತೆಗೆ ನಿಕಟ ಬಾಂಧವ್ಯವನ್ನು ಇಟ್ಟುಕೊಂಡಿದ್ದರು. ಆಗಾಗ್ಯೆ ಅವರ ಬಗ್ಗೆ ಮನೆಯಲ್ಲಿ ಸಂಭಾಷಣೆ ನಡೆಸುತ್ತಿದ್ದರು.' ಇದನ್ನು ಪ್ರಶಂಸಿಸುತ್ತಾ ವಾಲ್ ಕೋನ್ಸ್ಕಿ ಹೇಳಿದನು: 'ಸ್ವಾಮಿ ವಿವೇಕಾನಂದರು ಅಮೆರಿಕೆಯಲ್ಲೆಲ್ಲ ಮಹಾನ್ ಸಂಚಲನವನ್ನೇ ಉಂಟುಮಾಡಿದರು! ಅದರಲ್ಲೂ ಚಿಕಾಗೋದ ಸಭ್ಯ ಮಹಿಳೆಯರು ಅವರನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಆ ಮಹಿಳೆಯರು ಮೊದಲಬಾರಿಗೆ ಜೀವನವನ್ನು, ಹಾಗೆ ನೋಡಿದರೆ ತಮ್ಮನ್ನೇ ಗಂಭೀರವಾಗಿ ಪರಿಗಣಿಸಿದರು!' ''

ಈ ಸಂದರ್ಭದಲ್ಲಿ ಆ ಕಾಲದ ಅಮೆರಿಕದ ಸ್ತ್ರೀಸಮಾಜದ ಬಗ್ಗೆ ಕೆಲವು ಮಾತುಗಳನ್ನು ಹೇಳಲೇಬೇಕು. ಆ ಕಾಲಘಟ್ಟದಲ್ಲಿ ಅಮೆರಿಕೆಯ ಮಹಿಳೆಯರು ತಮ್ಮ ಸ್ವಾತಂತ್ರ್ಯ ಮತ್ತು ಘನತೆಗಳನ್ನು ಕಾಪಾಡಿಕೊಳ್ಳುವುದಕ್ಕೆ ಹೋರಾಡುತ್ತಿದ್ದರು. ಚಿಕಾಗೋದ ಸಮ್ಮೇಳನದಲ್ಲಿ ಅನೇಕ ಮಹಿಳೆಯರನ್ನು ನಿರ್ವಾಹಕರನ್ನಾಗಿ ನಿಯೋಜನೆ ಮಾಡಲಾಗಿತ್ತು. ಇದು ಅವರಿಗೆ ಹೊಸ ಉತ್ಸಾಹ ಮತ್ತು ಆತ್ಮವಿಶ್ವಾಸಗಳನ್ನು ತಂದುಕೊಟ್ಟಿತು. ಸ್ವಾಮಿ ವಿವೇಕಾನಂದರು ಕೂಡ ತಮ್ಮ ವೇದಾಂತ ಸಂದೇಶದಲ್ಲಿ, ಸ್ವಾತಂತ್ರ್ಯವು ಪ್ರತಿಯೊಬ್ಬ ವ್ಯಕ್ತಿಯ ಜನ್ಮಸಿದ್ಧ ಹಕ್ಕು ಎಂದು ಪ್ರತಿಪಾದಿಸಿದರು. ಹೀಗಾಗಿ ಅವರ ಪ್ರವಚನ ಮತ್ತು ಬೋಧನೆಗಳು ಅಮೆರಿಕದ ಮಹಿಳೆಯರಿಗೆ ಬಹಳ ಮೆಚ್ಚುಗೆಯಾದವು. ಆ ಮಹಿಳೆಯರು ತಮ್ಮ ಸ್ವಾತಂತ್ರ್ಯದ ದನಿಯನ್ನು ಸ್ವಾಮೀಜಿಯವರ ಮಾತುಗಳಲ್ಲಿ ಕಂಡುಕೊಂಡರು. ಇದಕ್ಕೆ ಕಾರಣ, ಸ್ವಾಮೀಜಿ ಅವರಿಗೆ ಸಮಾಜ ದಲ್ಲಿ ಗೌರವಯುತವಾದ ಸ್ಥಾನವನ್ನು ತಂದುಕೊಡುವ ಉತ್ತೇಜಕ ಮಾತುಗಳನ್ನು ಆಡುತ್ತಿದ್ದರು.

ಸ್ವಾಮೀಜಿಯವರು ಕೂಡ ಅಮೆರಿಕೆಯ ಮಹಿಳೆಯರು ತಮಗೆ ನೀಡಿದ ಅಪೂರ್ವ ಸ್ವಾಗತವನ್ನು ಕುರಿತು ಪ್ರಶಂಸೆಯನ್ನು ಮಾಡಿದ್ದಾರೆ. ತಮ್ಮ ಪತ್ರಗಳಲ್ಲಿ ಸ್ವಾಮೀಜಿಯವರು, ಈ ಮಹಿಳೆಯರನ್ನು 'ದೇವಿಯರು' ಎಂದೇ ಹೆಸರಿಸುತ್ತಾರೆ. ''ಜಗತ್ತಿನಲ್ಲೆಲ್ಲೂ ಈ ದೇಶದಲ್ಲಿನ ಸ್ತ್ರೀಯರನ್ನು ಮೀರಿಸುವವರಿಲ್ಲ. ಅದೆಷ್ಟು ಪರಿಶುದ್ಧ, ಸ್ವತಂತ್ರ, ಸ್ವಾವಲಂಬಿ ಮತ್ತು ದಯಾಮಯ ಹೃದಯದವರು ಅವರು! ಮಹಿಳೆಯರೇ ಈ ದೇಶದ ಜೀವಾಳವಾಗಿದ್ದಾರೆ! ಆತ್ಮವಾಗಿದ್ದಾರೆ! ಎಲ್ಲ ಪಾಂಡಿತ್ಯ ಮತ್ತು ಸಂಸ್ಕೃತಿ ಇವರಲ್ಲಿಯೇ ಕೇಂದ್ರೀಕೃತವಾಗಿದೆ. ಅಮೆರಿಕದ ಮಹಿಳೆಯರನ್ನು ಕಂಡು ನಾನು ಸ್ತಂಭೀಭೂತನಾಗಿ ಹೋಗಿದ್ದೇನೆ!'' ಎಂದು ಮನಃಪೂರ್ತಿಯಾಗಿ ಹೊಗಳುತ್ತಾರೆ.

ಸ್ವಾಮೀಜಿಯವರ ಸಂದೇಶಗಳಿಗೆ ಪುರುಷರಿಗಿಂತ ಮಹಿಳೆಯರು ಹೆಚ್ಚು ಮಾರುಹೋಗಿರಬಹುದು. ಆದರೆ, ನಿಜದ ಸಂಗತಿಯೆಂದರೆ, ಮಹಿಳೆಯರು ಮತ್ತು ಪುರುಷರು ಇಬ್ಬರೂ ಸ್ವಾಮೀಜಿಯವರೆಡೆಗೆ ಅಯಸ್ಕಾಂತದಂತೆ ಆಕರ್ಷಿತರಾದರು. ಸರ್ವಧರ್ಮ ಸಮ್ಮೇಳನದಲ್ಲಿ ಕಂಡು ಬರುವ ಸ್ವಾಮಿ ವಿವೇಕಾನಂದರ ವ್ಯಕ್ತಿತ್ವ ಬಹಳ ವರ್ಣಮಯವಾದುದು; ಕ್ರಿಯಾಶೀಲವಾದುದು. ಅವರು ತಮ್ಮ ಶಕ್ತಿಪೂರ್ಣ ವ್ಯಕ್ತಿತ್ವದಿಂದ ಇಡೀ ಪರಿಸರವನ್ನೇ ತಮ್ಮ ಪ್ರಭಾವದ ಸೆಳೆತಕ್ಕೆ ಸೆಳೆದುಕೊಳ್ಳುತ್ತಿದ್ದರು. ಹಾಗೆಯೇ ತಮ್ಮ ಸಂದೇಶದ ಪರಿಶುದ್ಧತೆಯಿಂದ ಎಲ್ಲರನ್ನೂ ಮುಗ್ಧರನ್ನಾಗಿಸುತ್ತಿದ್ದರು. ಸ್ವಾಮೀಜಿ ಆ ಸಮಯದಲ್ಲಿ ತಮ್ಮ ಯೌವನದ ತೇಜಸ್ಸು ಮತ್ತು ಪಾವಿತ್ರ್ಯತೆಗಳ ಬೆಳಕಿನಲ್ಲಿ ಎಲ್ಲರ ಕಣ್ಣಿಗೆ ಸೂರ್ಯನಂತೆ ಕಂಡುಬರುತ್ತಿದ್ದರು. ಇಡೀ ಜಗತ್ತನ್ನು ಎದುರಿಸಲು ಅವರು ಸನ್ನದ್ಧರಾಗಿದ್ದರು. ಬಡ, ಅಜ್ಞಾನಿ ಮತ್ತು ತುಳಿಯಲ್ಪಟ್ಟ ಜನರ ಸಲುವಾಗಿ ತಮ್ಮ ಇಡೀ ಜೀವನವನ್ನು ಮುಡಿಪಾಗಿಡಲು ಪಣತೊಟ್ಟಿದ್ದರು.

ಪ್ರಾಪಂಚಿಕರಾದ ಅಂದಿನ ಅಮೆರಿಕದ ಜನತೆಗೆ ಸ್ವಾಮೀಜಿಯವರ ಆಧ್ಯಾತ್ಮಿಕ ಪ್ರತಿಭೆಯನ್ನು ಗುರುತಿಸಲು ಸಾಧ್ಯವಾಗಲಿಲ್ಲ ಎನ್ನುವುದೇನೋ ನಿಜವೇ. ಆದರೆ, ಸ್ವಾಮೀಜಿಯವರಲ್ಲಿ ಅಪೂರ್ವವಾದ ದಿವ್ಯಶಕ್ತಿಯನ್ನು ಅಲ್ಲಿನ ಜನತೆ ಕಂಡುಕೊಂಡದ್ದಂತೂ ಸತ್ಯ. ಸ್ವಾಮೀಜಿಯವರೇ ತಮ್ಮ ಪತ್ರಗಳಲ್ಲಿ ಬರೆದುಕೊಂಡಂತೆ, ನೂರಾರು ಜನರು ಚಿಕಾಗೋದ ರಸ್ತೆರಸ್ತೆಗಳಲ್ಲಿ ಸ್ವಾಮಿ ವಿವೇಕಾನಂದರ ದರ್ಶನವನ್ನು ಪಡೆಯಲು ಪರಸ್ಪರ ನೂಕುನುಗ್ಗಲು ಮಾಡಿಕೊಂಡು ಧಾವಿಸುತ್ತಿದ್ದರು. ಅವರ ಭಾಷಣವನ್ನು ಕೇಳಲು ಉತ್ಸುಕತೆಯಿಂದ ಬರುತ್ತಿದ್ದರು. ಅವರ ಕೆಲವೇ ಕೆಲವು ವಾಕ್ಯಗಳನ್ನು ಆಲಿಸಲು ಗಂಟೆಗಟ್ಟಲೆ ಪ್ರತೀಕ್ಷೆ ಮಾಡುತ್ತಿದ್ದರು. ಅವರು ವೇದಿಕೆಯ ಮೇಲೆ ಆಗಮಿಸಿದ ಒಡನೆ, ಹಲವು ನಿಮಿಷಗಳ ಕಾಲ ಕರತಾಡನ ಮಾಡುತ್ತಿದ್ದರು. ಹೀಗಾಗಿ, ತಮಗೇ ತಿಳಿಯದಂತೆ, ತಮ್ಮ ಅಂತರಾಳದಲ್ಲಿ ಅಮೆರಿಕೆಯ ಜನರು ಸ್ವಾಮೀಜಿಯವರಲ್ಲಿ ಅಂತರ್ಗತವಾಗಿದ್ದ ಆಧ್ಯಾತ್ಮಿಕ ಚೇತನವನ್ನು ಚೆನ್ನಾಗಿ ಗುರುತಿಸಿದ್ದರು. ಭಾರತದಲ್ಲಿ ಇರುವಂತೆ ಸಾಧುಗಳ ದರ್ಶನದ ಪದ್ಧತಿ ಅಮೆರಿಕದಲ್ಲಿ ಇರಲಿಲ್ಲ. ಆದರೆ, ಈ ವಿಷಯದಲ್ಲಿ ಅಮೆರಿಕದ ಜನರು ಭಾರತೀಯರಂತೆಯೇ ಭಾವುಕರಾಗಿ ಸ್ವಾಮೀಜಿಯವರ ದರ್ಶನವನ್ನು ಪಡೆದುಕೊಂಡರು. ಇದು ಸಹಜವಾದ ಮತ್ತು ತಾನೇ ತಾನಾಗಿ ಹೊಮ್ಮಿದ ಭಕ್ತಿ-ಶ್ರದ್ಧೆಗಳ ಸ್ರೋತವಾಗಿತ್ತು.

*(ಮುಂದುವರಿಯುವುದು)*